ಓ.ಎಸ್. ನಂ. 169 /2013
DW-3

**ಸಾಕ್ಷಿಯನ್ನು ದಿನಾಂಕ: 07-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ವಾದಿ ಪರ ಶ್ರೀ KBA ವಕೀಲರಿಂದ**

1. ವಾದಿಗಳು ಅಂಚೆಹಳ್ಳಿ ಗ್ರಾಮದ ವಾಸಿಗಳಾಗಿರುತ್ತಾರೆ. ವಾದಿಗಳು ನನಗೆ ಗೊತ್ತಿಲ್ಲ. ಈ ದಾವೆಯನ್ನು ಸುಮಾರು 12-13 ವರ್ಷಗಳ ಹಿಂದೆ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತು. ದುರ್ಗಪ್ಪರವರಿಗೆ ಕ್ರಯ ಆಗಿರುತ್ತದೆ ಎಂದು ಈ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾ ಆಸ್ತಿಯನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿ ಯ ಚಕ್ಕುಬಂದಿ ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ 9 ನೇ ಪ್ರತಿವಾದಿಗೆ ಸೇರಿದ ಜಮೀನು, ಉತ್ತರಕ್ಕೆ ನರಸಿಂಹಮೂರ್ತಿರವರ ಜಮೀನು, ದಕ್ಷಿಣಕ್ಕೆ ರಂಗಶಾಮಯ್ಯರವರ ಜಮೀನು ಬರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುತ್ತೇನೆ. 1979 ನೇ ಸಾಲಿನಲ್ಲಿ Tenancy ಯಲ್ಲಿ ಕೆಂಜಿಗಪ್ಪರವರಿಗೆ ದಾವಾ ಆಸ್ತಿ ಮಂಜೂರಾಗಿರುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುತ್ತೇನೆ. ಕೆಂಜಿಗಪ್ಪರವರಿಗೆ Tenancy ಯಲ್ಲಿ ಸ.ನ.42 ರಲ್ಲಿ 1 ಎಕರೆ 34 ಗುಂಟೆ ಮತ್ತು 43 ರಲ್ಲಿ 7 ಎಕರೆ ಮಂಜೂರಾಗಿರುತ್ತವೆ. ಸ.ನ. 42 ಯಾವಾಗ ದುರಸ್ತಿ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

2. ದಾವಾ ಆಸ್ತಿಯು ಈಗ 9 ನೇ ಪ್ರತಿವಾದಿ ಹೆಸರಿನಲ್ಲಿರುತ್ತದೆ. ದಾವಾ ಆಸ್ತಿಯನ್ನು ಕೆಂಜಿಗಪ್ಪನ ಹೆಂಡತಿ ಪುಟ್ಟನರಸಮ್ಮರವರು 9 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ದಾವಾ ಆಸ್ತಿಯು ಕೆಂಜಿಗಪ್ಪನಿಂದ ಪುಟ್ಟನರಸಮ್ಮರವರ ಹೆಸರಿಗೆ ಫವತಿ ವಾರಸು ಆಧಾರದ ಮೇಲೆ ಖಾತೆ ಬದಲಾವಣೆ ಆಗಿರುತ್ತದೆ. ಆ ರೀತಿ ಖಾತೆ ಬದಲಾವಣೆ ಆದ ವರ್ಷ ಮತ್ತು ಎಂ ಆರ್ ಸಂಖ್ಯೆ ನನ್ನಿಂದ ಹೇಳಲಾಗುವುದಿಲ್ಲ. 9 ನೇ ಪ್ರತಿವಾದಿ ಹೆಸರಿಗೆ ಆದ ಕ್ರಯಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಕ್ರಯಪತ್ರಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆಂದು ನಾನು ನೋಡಿರುವುದಿಲ್ಲ. 9 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರವನ್ನು ಕೈಬರವಣಿಗೆಯಲ್ಲಿ ಬರೆದುಕೊಟ್ಟಿರುತ್ತಾರೆ. ಕೆಂಜಿಗಪ್ಪರವರಿಗೆ ಇಬ್ಬರು ಮಕ್ಕಳು. Tenancy ಯಲ್ಲಿ ದಾವಾ ಆಸ್ತಿ ಕೆಂಜಿಗಪ್ಪರವರಿಗೆ ಮಂಜೂರಾದಾಗ ಅವರು ಮತ್ತು ಅವರ ಸಹೋದರರು ಒಟ್ಟು ಕುಟುಂಬದಲ್ಲಿದ್ದರು ಎಂದರೆ ಸರಿಯಲ್ಲ. ಮಲ್ಲಯ್ಯ, ರಂಗಪ್ಪ, ಮುದ್ದಪ್ಪ, ನರಸೀಯಪ್ಪ, ಬಸವನಾಯಕ ರವರು ಕೆಂಜಿಗಪ್ಪನ ಸಹೋದರರು.

ಕೆಂಜಿಗಪ್ಪ ಮತ್ತು ಅವರ ಸಹೋದರರು ಯಾವ ವರ್ಷದಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ವಿಭಾಗದಲ್ಲಿ ಕೆಂಜಿಗಪ್ಪ ಮತ್ತು ಅವರ ಸಹೋದರರರಿಗೆ ಯಾವ ಯಾವ ಆಸ್ತಿಗಳು ಅವರ ಹಿಸ್ಸೆಗೆ ಹೋಗಿರುತ್ತವೆ ಎಂದು ನನಗೆ ಗೊತ್ತಿಲ್ಲ.

2. ದಾವಾ ಆಸ್ತಿಯನ್ನು ಕೆಂಜಿಗಪ್ಪರವರು 1 ನೇ ವಾದಿಯ ಗಂಡ ದುರ್ಗಪ್ಪರವರಿಗೆ ದಿಃ 10.07.1972 ಕ್ರಯಪತ್ರದ ಮೂಲಕ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ದಾವಾ ಸ.ನಂ 42 ರ ಮೂಲ ಸ.ನಂಬರ್ 11 ಆಗಿತ್ತು ಎಂದರೆ ಸರಿಯಲ್ಲ. ಆ ರೀತಿ ಕ್ರಯಪತ್ರ ಬರೆದುಕೊಟ್ಟ ನಂತರ ದಾವಾ ಆಸ್ತಿಯಲ್ಲಿ ದುರ್ಗಪ್ಪರವರು ಸ್ವಾಧೀನದಲ್ಲಿದ್ದು , ಅವರು ಮರಣ ಹೊಂದಿದ ನಂತರ ವಾದಿಗಳು ಸ್ವಾಧೀನಾನುಭವದಲ್ಲಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ 9 ನೇ ಪ್ರತಿವಾದಿ ಹೆಸರಿಗೆ ಕ್ರಯಪತ್ರ ಬರೆದುಕೊಡಲು ಪುಟ್ಟನರಸಮ್ಮರವರಿಗೆ ಯಾವುದೇ ಹಕ್ಕು, ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 9 ನೇ ಪ್ರತಿವಾದಿ ಸ್ವಾಧೀನದಲ್ಲಿರುವುದಿಲ್ಲ, 9 ನೇ ಪ್ರತಿವಾದಿ ದಾವಾ ಆಸ್ತಿಯಲ್ಲಿನ ವಾದಿಗಳ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತಾರೆಂದರೆ ಸರಿಯಲ್ಲ. 9 ನೇ ಪ್ರತಿವಾದಿ ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡು ದಾವಾ ಆಸ್ತಿಯಲ್ಲಿರುವ ಮರಗಳನ್ನು ಕಡಿಯಲು ಹೋದಾಗ ವಾದಿಗಳು ಅದನ್ನು ತಡೆದು ಈ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ಸರಿಯಲ್ಲ, ಗಲಾಟೆ ಆಗಿರುವ ಬಗ್ಗೆ ನನಗೆ ಗೊತ್ತು. 9 ನೇ ಪ್ರತಿವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**